# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :43 ಪ್ರಾ.ಸಾ. : 58**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ್ ಜಿ.ಎನ್ |
| ತಂದೆಯ ಹೆಸರು | : | ಗೋಪಾಲ್ ನಾಯ್ಕ |
| ವಯಸ್ಸು | : | 40 ವರ್ಷ |
| ಕೆಲಸ | : | ಸಿ.ಹೆಚ್.ಸಿ-737, ಡಿ.ಸಿ.ಆರ್.ಈ. ಪೊಲೀಸ್ ಠಾಣೆ |
| ವಾಸ | : | ಕಾರವಾರ |

**ದಿನಾಂಕಃ 18-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. 2017 ರಿಂದ 2023 ರವರೆಗೆ ನಾನು ಕಾರವಾರದ ಶಹರು ಪೊಲೀಸ್ ಠಾಣೆಯಲ್ಲಿ ಸಿ.ಪಿ.ಸಿ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಸದರಿ ಅವಧಿಯಲ್ಲಿ ನನ್ನನ್ನು ಕಾರವಾರ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಗೆ ನಿಯೋಜನೆ ಮಾಡಲಾತ್ತು. ನಾನು ಡಿಜಿಟಲ್ ಕ್ಯಾಮೆರಾಗಳನ್ನು ಬಳಸಿ, ಪೋಟೋ ತೆಗೆಯುವ, ವಿಡಿಯೋ ಮಾಡುವ ಹಾಗೂ ಕಂಪ್ಯೂಟರ್ ಬಳಸುವ ಜ್ಞಾನವನ್ನು ಹೊಂದಿರುತ್ತೇನೆ. ಈ ಬಗ್ಗೆ ಇಲಾಖಾ ವತಿಯಿಂದ ತರಬೇತಿಯನ್ನು ನೀಡಿರುತ್ತಾರೆ.

2. ದಿ.23-10-2018 ರಂದು ಚಾಸಾ-69 ರವರು ನನಗೆ ಈ ಪ್ರಕರಣದ ತನಿಖಾ ಸಹಾಯಕನಾಗಿ ಬರುವಂತೆ ಹೇಳಿದ ಮೇರೆಗೆ, ಬೆಳಿಗ್ಗೆ 8.15 ರಿಂದ 8.30 ಗಂಟೆಗೆ ನಾನು ಕಾರವಾರದ ಶಹರ ಠಾಣೆಗೆ ಹೋಗಿರುತ್ತೇನೆ. ನಾನು ಠಾಣೆಗೆ ಹೋದಾಗ, ಅಲ್ಲಿ ಮೃತನ ಸಂಬಂಧಿಕರು, ಇಬ್ಬರು ಪಂಚರು ಮತ್ತು 2 ಮತ್ತು 3 ನೇ ಆರೋಪಿತರು ಠಾಣೆಯಲ್ಲಿದ್ದು, ಅವರನ್ನು ಚಾಸಾ-69 ರವರು ವಿಚಾರಣೆ ಮಾಡುತ್ತಿದ್ದರು. ಆ ಸಮಯದಲ್ಲಿ 2 ಮತ್ತು 3 ನೇ ಆರೋಪಿಯು "1 ನೇ ಆರೋಪಿ ಮತ್ತು ಮೃತ ಪ್ರೇಮ್ ಕುಮಾರನ ನಡುವೆ ವ್ಯವಹಾರದ ಸಂಬಂಧ ವೈಷಮ್ಯ ಇದ್ದು, 1 ನೇ ಆರೋಪಿಯು 2 ನೇ ಆರೋಪಿಗೆ ಪ್ರೇಮ್ ಕುಮಾರನನ್ನು ಕೊಲೆ ಮಾಡುವಂತೆ ಹೇಳಿದ್ದು, ಅದರಂತೆ 2 ನೇ ಆರೋಪಿಯು 3 ನೇ ಆರೋಪಿಯೊಂದಿಗೆ

ಸೇರಿ, ಪ್ರೇಮ್ ಕುಮಾರನನ್ನು ಕೊಲೆ ಮಾಡುವ ಉದ್ದೇಶದಿಂದ ಆತನನ್ನು ಉಳವಿಯ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಕಾರು ಹಾಗೂ ಮೋಟಾರು ಸೈಕಲನ್ನು ನಿಲ್ಲಿಸಿಟ್ಟ ಸ್ಥಳಗಳು, ಕಣ್ಣಿಗೆ ಬಟ್ಟೆ ಕಟ್ಟಿದ್ದ ಸ್ಥಳ, ಕತ್ತಿಯಿಂದ ಹಲ್ಲೆ ಮಾಡಿ ಕೊಲೆ ಮಾಡಿದ ಸ್ಥಳ, ಶವವನ್ನು ಬಿಸಾಡಿದ ಸ್ಥಳಗಳನ್ನು ನಮ್ಮೊಂದಿಗೆ ಬಂದರೆ ತೋರಿಸುತ್ತೇವೆ" ಎಂದು ಹೇಳಿರುತ್ತಾರೆ.

3. ಆ ಸಮಯದಲ್ಲಿ ಚಾಸಾ-69 ರವರು ತಮ್ಮೊಂದಿಗೆ ಕ್ಯಾಮೆರಾದೊಂದಿಗೆ ಬರುವಂತೆ ಹಾಗೂ ತನಿಖೆಗೆ ಸಹಕರಿಸುವಂತೆ ಸೂಚಿಸಿರುತ್ತಾರೆ. ಸದರಿಯವರ ಸೂಚನೆಯ ಮೇರೆಗೆ ನಾನು ಕಚೇರಿಯಲ್ಲಿದ್ದ ಕ್ಯಾಮೆರಾವನ್ನು ತೆಗೆದುಕೊಂಡು ತನಿಖಾಧಿಕಾರಿಯೊಂದಿಗೆ ಹೋಗಿದ್ದು, ಅದರಂತೆ ತನಿಖಾಧಿಕಾರಿಯು ನಮ್ಮನ್ನು, 2 ಮತ್ತು 3 ನೇ ಆರೋಪಿತರನ್ನು, ಇಬ್ಬರು ಪಂಚರನ್ನು, ಮೃತನ ಸಂಬಂಧಿಕರನ್ನು ಇಲಾಖಾ ವಾಹನಗಳಲ್ಲಿ 2 ಮತ್ತು 3 ನೇ ಆರೋಪಿತರು ಕರೆದುಕೊಂಡು ಹೋಗಿರುತ್ತಾರೆ. ಆದಿನ ನಮ್ಮೊಂದಿಗೆ ವೈದ್ಯಾಧಿಕಾರಿಗಳು ಆ್ಯಂಬುಲೆನ್ಸ್ ನಲ್ಲಿ ಬಂದಿರುತ್ತಾರೆ. ನಂತರ ನಾವು ಉಳವಿ ಚೆಕ್ ಪೋಸ್ಟ್ ಬಳಿ ಹೋದಾಗ 2 ಮತ್ತು 3 ನೇ ಆರೋಪಿತರು ವಾಹನವನ್ನು ನಿಲ್ಲಿಸುವಂತೆ ಸೂಚಿಸಿ, ಕೆಳಗೆ ಇಳಿದು, ಆಕಳಗವಿ ಅರಣ್ಯ ಪ್ರದೇಶಕ್ಕೆ ಹೋಗುವ ರಸ್ತೆಯಲ್ಲಿ ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಗೆ ಹೋದ ನಂತರ 2 ಮತ್ತು 3 ನೇ ಆರೋಪಿತರು ಮೊದಲಿಗೆ ಶವ ಬಿದ್ದ ಸ್ಥಳವನ್ನು ತೋರಿಸಿರುತ್ತಾರೆ. ಸದರಿ ಸ್ಥಳವನ್ನು ತನಿಖಾಧಿಕಾರಿಗಳು ಪರಿಶೀಲಿಸಿ, ಪಂಚನಾಮೆ ಮಾಡಿದ್ದು, ಆ ಸಮಯದಲ್ಲಿ ನಾನು ಕ್ಯಾಮೆರಾದಿಂದ ನಿಪಿ-13 ಮತ್ತು 14 ರಂತೆ ಫೋಟೋ ತೆಗೆದಿರುತ್ತೇನೆ.

4. ಆನಂತರ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಶವ ಪಂಚನಾಮೆಯನ್ನು ಮಾಡಿದ್ದು, ಆ ಸಮಯದಲ್ಲಿ ನಾನು ಅವರ ಸೂಚನೆಯ ಮೇರೆಗೆ, ನಿಪಿ-16 ಮತ್ತು 17 ರಂತೆ ಫೋಟೊ ತೆಗೆದಿರುತ್ತೇನೆ. ನಂತರ ಆರೋಪಿತರು ತಾವು ಪ್ರೇಮ್ ಕುಮಾರನ ಕಣ್ಣಿಗೆ ಬಟ್ಟೆ ಕಟ್ಟಿದ್ದ ಸ್ಥಳ ಹಾಗೂ ಕತ್ತಿಯಿಂದ ಹಲ್ಲೆ ಮಾಡಿದ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳವನ್ನು ಪರಿಶೀಲಿಸಿ, ತನಿಖಾಧಿಕಾರಿಯು ಪಂಚನಾಮೆ ಮಾಡಿದ್ದು, ಅವರ ಸೂಚನೆಯ ಮೇರೆಗೆ ನಿಪಿ-19 ಮತ್ತು 20 ರಂತೆ ಫೋಟೊ ತೆಗೆದಿರುತ್ತೇನೆ. ಆನಂತರ 3 ನೇ ಆರೋಪಿಯು ಕೊಲೆ ಮಾಡುವ ಪೂರ್ವದಲ್ಲಿ ತಾನು ಬೈಕ್ ನಿಲ್ಲಿಸಿಟ್ಟ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳವನ್ನು ಪರಿಶೀಲಿಸಿ, ತನಿಖಾಧಿಕಾರಿಯು ಪಂಚನಾಮೆ ಮಾಡಿದ್ದು, ಅವರ ಸೂಚನೆಯ ಮೇರೆಗೆ ನಿಪಿ-22 ಮತ್ತು 23 ರಂತೆ ಫೋಟೊ ತೆಗೆದಿರುತ್ತೇನೆ. ಆನಂತರ 2 ನೇ ಆರೋಪಿಯು ತಾನು ಕಾರು ನಿಲ್ಲಿಸಿಟ್ಟ

ಸ್ಥಳವನ್ನು ತೋರಿಸಿದ್ದು, ಅಲ್ಲಿಯೂ ಸಹ ಸದರಿ ಸ್ಥಳವನ್ನು ಪರಿಶೀಲಿಸಿ, ತನಿಖಾಧಿಕಾರಿಯು ಪಂಚನಾಮೆ ಮಾಡಿದ್ದು, ಅವರ ಸೂಚನೆಯ ಮೇರೆಗೆ ನಿಪಿ-25 ಮತ್ತು 26 ರಂತೆ ಫೋಟೊ ತೆಗೆದಿರುತ್ತೇನೆ. ಆನಂತರ ತನಿಖಾಧಿಕಾರಿಯು ತನಿಖಾ ಕ್ರಮವನ್ನು ಜರುಗಿಸಿ, ಠಾಣೆಗೆ ವಾಪಾಸು ಬಂದಿರುತ್ತೇವೆ.

5. ಠಾಣೆಗೆ ಬಂದ ಬಳಿಕ 2 ನೇ ಆರೋಪಿಯು ತಾನು ಪ್ರೇಮ್ ಕುಮಾರನನ್ನು ಕಾರವಾರದಿಂದ ಕರೆದುಕೊಂಡು ಹೋದ ಸ್ಥಳ ಹಾಗೂ ಪ್ರೇಮ್ ಕುಮಾರನು ಬೈಕ್ ನಿಲ್ಲಿಸಿಟ್ಟ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ್ದು, ಅದರಂತೆ ತನಿಖಾಧಿಕಾರಿಯವರು 2 ಮತ್ತು 3 ನೇ ಆರೋಪಿತರನ್ನು, ಇಬ್ಬರು ಪಂಚರನ್ನು ಮತ್ತು ನಮ್ಮನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗಿದ್ದು, 2 ನೇ ಆರೋಪಿಯು ನಮ್ಮನ್ನು ಕಾರವಾರದ ಜಿಲ್ಲಾಸ್ಪತ್ರೆಯ ಆವರಣಕ್ಕೆ ಕರೆದುಕೊಂಡು ಹೋಗಿ, ತಾನು ಪ್ರೇಮ್ ಕುಮಾರನನ್ನು ಕಾರಿನಲ್ಲಿ ಕರೆದುಕೊಂಡು ಹೋದ ಸ್ಥಳ ಮತ್ತು ಪ್ರೇಮ್ ಕುಮಾರನು ಬೈಕ್ ನಿಲ್ಲಿಸಿಟ್ಟ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳವನ್ನು ಪರಿಶೀಲಿಸಿ, ತನಿಖಾಧಿಕಾರಿಯು ಪಂಚನಾಮೆ ಮಾಡಿದ್ದು, ಅವರ ಸೂಚನೆಯ ಮೇರೆಗೆ ನಿಪಿ-2 ಮತ್ತು 3 ರಂತೆ ಫೋಟೊ ತೆಗೆದಿರುತ್ತೇನೆ.

6. ನಂತರ 2 ಮತ್ತು 3 ನೇ ಆರೋಪಿತರ ಹೇಳಿಕೆಯ ಮೇರೆಗೆ ಪ್ರೇಮ್ ಕುಮಾರನನ್ನು ಕೊಲೆ ಮಾಡಿದ ನಂತರ ತಾವು ಕೊಲೆ ಮಾಡಲು ಉಪಯೋಗಿಸಿದ ಕತ್ತಿಗಳನ್ನು, ಕಣ್ಣಿಗೆ ಕಟ್ಟಿದ್ಧ ಬಟ್ಟೆಯನ್ನು, 2 ನೇ ಆರೋಪಿಯು ತಾನು ಕೃತ್ಯದ ಕಾಲದಲ್ಲಿ ಧರಿಸಿದ ಬಟ್ಟೆಗಳನ್ನು, ಪ್ರೇಮ್ ಕುಮಾರನ ಮೈಮೇಲಿದ್ದ ಬಟ್ಟೆಗಳನ್ನು, ಆತನ ಪರ್ಸ್, ಶೂಗಳನ್ನು ಎಸೆದ ಸ್ಥಳಕ್ಕೆ ದಿ.26-10-2018 ರಂದು ತನಿಖಾಧಿಕಾರಿಯವರು ನಮ್ಮನ್ನು, 2 ಮತ್ತು 3 ನೇ ಆರೋಪಿತರನ್ನು ಇಬ್ಬರು ಪಂಚರನ್ನು ಇಲಾಖಾ ವಾಹನಗಳಲ್ಲಿ ಕರೆದುಕೊಂಡು ಹೋಗಿದ್ದು, ಗಣೇಶಗುಡಿಯ ಸೇತುವೆಯ ಬಳಿ ವಾಹನಗಳನ್ನು ನಿಲ್ಲಿಸುವಂತೆ ಸೂಚಿಸಿದ್ದು, 2 ನೇ ಆರೋಪಿಯು ವಾಹನದಿಂದ ಕೆಳಗೆ ಇಳಿದು, ತಾನು ಮೇಲೆ ಹೇಳಿದ ವಸ್ತುಗಳನ್ನು ನದಿಗೆ ಎಸೆದ ಸ್ಥಳವನ್ನು ತೋರಿಸಿದ್ದು, ತನಿಖಾಧಿಕಾರಿಯು ಸದರಿ ಸ್ಥಳವನ್ನು ಮುಳುಗು ತಜ್ಞರ ಮೂಲಕ ಹುಡುಕಾಟ ನಡೆಸಿದ್ದು, ಒಂದು ಕತ್ತಿ ಮಾತ್ರ ದೊರಕಿದ್ದು, ಸದರಿ ಕತ್ತಿಯನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ಅವರ ಸೂಚನೆಯ ಮೇರೆಗೆ ನಿಪಿ-4 ಮತ್ತು 5 ರಂತೆ ಫೋಟೊ ತೆಗೆದಿರುತ್ತೇನೆ.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಗೆ ಹಾಗೂ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.